ಮದುವೆ ಫೋಟೋದಲ್ಲಿ ಶಂಕ್ರಿ ತಲೆ ಮೇಲಿದ್ದ ಕೂದಲು ಇಪ್ಪತ್ತನೇ ವೆಡ್ಡಿಂಗ್ ಆನಿವರ್ಸರಿ ವೇಳೆಗೆ ಮಂಗಮಾಯವಾಗಿದ್ದವು. ಗಂಡನ ಮೇಲೆ ಸದಾ ಒಂದು ಕಣ್ಣು ಇಟ್ಟೇ ಇದ್ದ ಸುಮಿಗೆ 'ಅದ್ಯಾವಾಗ ಕೂದಲು ಉದುರಿಹೋದವು' ಅನ್ನೋದು ಗೊತ್ತೇ ಆಗಿರಲಿಲ್ಲ. ಮದುವೆ ಹೊಸದರಲ್ಲಿ ಕೂದಲ ಬಗ್ಗೆ ಕಾಳಜಿ ವಹಿಸುತ್ತಿದ್ದ ಶಂಕ್ರಿ, ಅವು ಉದುರಲು ಶುರುವಾದ ಮೇಲೆ ಅದರ ಆಸೆ ಬಿಟ್ಟ' ಕೇರ್‌ಲೆಸ್ ಆಗಿದ್ದ. ಇಷ್ಟು ವರ್ಷದ ಸಾಂಸಾರಿಕ ಬದುಕಿನಲ್ಲಿ ಹೆಣಗಿ ಸಾಗಿದ ಸವೆದ ಹಾದಿಯಂತಾಗಿತ್ತು ಶಂಕ್ರಿ ತಲೆ. ಗಂಡ ಕೂದಲು ಕಳೆದುಕೊಂಡಿದ್ದು ಸುಮಿಗೆ ಭರಿಸಲಾಗದ ದುಃಖವಾಗಿತ್ತು.

ಶಂಕ್ರಿಯ ಅಂದದ ಹೇರ್‌ಸ್ಟೈಲ್, ಚೆಂದದ ಮೀಸೆಗೆ ಮರುಳಾಗಿ ಸುಮಿ ಅವನನ್ನು ಮದುವೆಯಾಗಿದ್ದಳು. ಗೆಳತಿಯರ ಎದುರು ತನ್ನ ಗಂಡನ ಹೇರ್‌ಸ್ಟೈಲ್ ಬಗ್ಗೆ ಕೊಚ್ಚಿಕೊಂಡಿದ್ದಳು. ಯಾರ ಕೆಟ್ಟ ಕಣ್ಣು ಬಿದ್ದಿತೋ ಏನೋ – ವರ್ಷಗಳು ಕಳೆದಂತೆ ಶಂಕ್ರಿ ಕೂದಲು ಕಳಕೊಂಡ, ಸುಮಿ ಶಾಂತಿ ಕಳಕೊಂಡಳು.

ಗಂಡ ಎಷ್ಟೇ ಹಣ–ಆಸ್ತಿ ಸಂಪಾದಿಸಿದರೇನು, ತಲೆ ಮೇಲೆ ಕೂದಲು ಉಳಿಸಿಕೊಳ್ಳಲಿಲ್ಲ ಅನ್ನೋ ಕೊರಗಿತ್ತು ಸುಮಿಗೆ. ಬ್ಯಾಂಕ್ ಅಕೌಂಟಿನಲ್ಲಿ ಎಷ್ಟು ಹಣ ಇದೆ ಅನ್ನೋದಕ್ಕಿಂತಾ ನೆತ್ತಿ ಮೇಲೆ ಎಷ್ಟು ಕೂದಲು ಇವೆ ಎಂಬುದು ಕೂಡಾ ಕುಟುಂಬದ ಗೌರವದ ಪ್ರಶ್ನೆ ಎಂದು ಅನಿಸಿತ್ತು. ಮಕ್ಕಳನ್ನು ಸಾಕುವುದಕ್ಕಿಂತಾ ಗಂಡನ ಕೂದಲು ಸಾಕುವುದು ಕಷ್ಟ ಅನ್ನುವಷ್ಟು ನೊಂದಿದ್ದಳು. ಮದುವೆ ಆಗಿ ಗಂಡನ ಕೂದಲು ಕಿತ್ತುಕೊಂಡಳು ಎಂಬ ಆಪಾದನೆ ಬರಬಾರದು ಅಂತ ಸುಮಿ ಗಂಡನ ಕೂದಲು ಉಳಿಸಲು ಹರಸಾಹಸಪಟ್ಟಳು.

'ಸುಮೀನ ಕಟ್ಟಿಕೊಂಡ ಶಂಕ್ರಿ ಅವಳ ಜೊತೆ ಹೆಣಗಿ ಹೆಣಗಿ ಕೂದಲು ಕಳಕೊಂಡ', 'ಗಂಡನ ಕೂದಲು ಕಾಪಾಡಿಕೊಳ್ಳದವಳು, ಸಂಸಾರ ಕಾಪಾಡುತ್ತಾಳಾ' ಅಂತ ಆಗದವರು ಹಂಗಿಸಿದ್ದರು. 'ನಮ್ಮ ವಂಶದಲ್ಲಿ ಯಾರಿಗೂ ಕೂದಲು ಉದುರಿಲ್ಲ, ವಯಸ್ಸಾಗಿ ಹಲ್ಲು ಉದುರಿದ್ದರೂ ಕೂದಲು ಉದುರಿಸಿಕೊಂಡಿಲ್ಲ' ಅಂತ ಸುಮಿಯ ಅತ್ತೆ ಲೊಚಗುಟ್ಟಿದ್ದಳು. 'ನನ್ನ ಇತರೆ ಸೊಸೆಯರು ತಮ್ಮ ಗಂಡಂದಿರ ಕೂದಲು ಮುಕ್ಕಾಗದಂತೆ ನೋಡಿಕೊಂಡಿದ್ದಾರೆ, ಈ ಸುಮಿ ತನ್ನ ಗಂಡನ ಕೂದಲನ್ನು ಬಾಳಲು ಬಿಡಲಿಲ್ಲ' ಎಂದೂ ಅತ್ತೆ ಸರೀಕರೆದುರು ಹೇಳಿಕೊಂಡು ಸುಮಿಯ ಕರುಳು ಕಿವುಚಿದ್ದಳು.

ಕಣ್ಣು, ಕಿಡ್ನಿ ಪಡೆಯುವಂತೆ ಕೂದಲನ್ನು ದಾನ ಪಡೆದು ಜೋಡಿಸುವ ಅವಕಾಶ ಇದ್ದಿದ್ದರೆ, ಹೊಲ–ಗದ್ದೆಗಳಲ್ಲಿ ಪೈರು ನಾಟಿ ಮಾಡುವಂತೆ ಬೇರೆಯವರ ತಲೆ ಮೇಲಿನ ಕೂದಲನ್ನು ಬೇರು ಸಮೇತ ಕಿತ್ತು ತಂದು ನಾಟಿ ಮಾಡಿ ಬೆಳೆಸುವಂತಿದ್ದರೆ ಸುಮಿ ಸುಮ್ಮನಿರುತ್ತಿರಲಿಲ್ಲ. ನಾಟಿ ಮಾಡಿ ಒಳ್ಳೆ ಇಳುವರಿ ಪಡೆಯುತ್ತಿದ್ದಳು.

ಹತ್ತಾರು ತೈಲ ಕಂಪನಿಗಳಿಗೆ ಮೊರೆ ಹೋದ ಸುಮಿ, ಶಂಕ್ರಿಯ ನೆತ್ತಿ ಕಿತ್ತು ಬರುವಂತೆ ಎಣ್ಣೆ ಉಜ್ಜಿದಳು. ಉದುರುವಿಕೆ ನಿಲ್ಲಲಿಲ್ಲ. ಕೂದಲು ತಜ್ಞರಿಗೆ ಗಂಡನ ತಲೆ ತೋರಿಸಿದಳು. ವೈದ್ಯರು ಕೊಟ್ಟ ಸಲಹೆ, ಚಿಕಿತ್ಸೆ ಅನುಸರಿಸಿದಳು. ಫಲಿತಾಂಶ ಸೊನ್ನೆ.

'ನಿಮ್ಮ ಮನೆಯ ನೀರು ಸರಿ ಇಲ್ಲ, ಗಂಡನ ಸ್ನಾನದ ನೀರು ಬದಲಾಯಿಸಿ, ನಿಮ್ಮ ಮನೆ ವಾಸ್ತು ಸರಿ ಇಲ್ಲ ಮನೆ ಬದಲಾಯಿಸಿ' ಅಂತೆಲ್ಲಾ ಕೆಲವರು ಸಲಹೆ ಕೊಟ್ಟು ಸುಮಿಯನ್ನು ಇನ್ನಷ್ಟು ಗಾಬರಿ ಮಾಡಿದರು. ಮನೆ ಬದಲಾಯಿಸಿದರೂ ಪರಿಸ್ಥಿತಿ ಬದಲಾಗಲಿಲ್ಲ. 'ದೇವರೇ, ಗಂಡನ ಕೂದಲು ಚಿಗುರಿಸಿದರೆ ಅವರ



ನೆತ್ತಿ ಮೇಲೆ ಉಳಿದಿರುವ ಕೂದಲನ್ನು ಮುಡಿ ಕೊಡ್ತೀನಿ' ಅಂತ ಸುಮಿ ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತು, ಶಂಕ್ರಿ ಕೇಶವನ್ನು ತಿಮ್ಮಪ್ಪನಿಗೆ ಅರ್ಪಿಸಿದಳು. ತಿಮ್ಮಪ್ಪ ಕರುಣೆ ತೋರಲಿಲ್ಲ, ಶಂಕ್ರಿ ಕೂದಲು ತಲೆ ಮೇಲೆ ನಿಲ್ಲಲಿಲ್ಲ. ಅಂತಿಮವಾಗಿ ಗಂಡನ ಉದುರಿದ ತಲೆ ಕೂದಲ ಮುಂದೆ ಸುಮಿ ತಲೆ ತಗ್ಗಿಸಿ ಶರಣಾದಳು.

ಗಂಡಂದಿರ ತಲೆ ಕೂದಲು ಉದುರುವುದು ಎಲ್ಲರ ಮನೆಯ ಸಹಜ ಸಾಂಸಾರಿಕ ಸಮಸ್ಯೆ ಎಂದು ಸಮಾಧಾನ ಮಾಡಿಕೊಂಡಳು. ಕೂದಲಿಗೆ ವಿಮಾ ಸೌಕರ್ಯ ಇದ್ದಿದ್ದರೆ ಉದುರಿದಷ್ಟೂ ಲಾಭ ಎಂದುಕೊಳ್ಳಬಹುದಿತ್ತು, ಯಾವುದಕ್ಕೂ ಪ್ರಯೋಜನವಿಲ್ಲದ ಗಂಡನ ಕೂದಲು ಇದ್ದರೆಷ್ಟು ಬಿಟ್ಟರೆಷ್ಟು ಎಂದು ತೃಪ್ತಿ ಕಂಡಳು.

'ಪಾಲಿಗೆ ಬಂದದ್ದೇ ಪಂಚಾಮೃತ ' ಎಂದುಕೊಂಡು, ಗಂಡನ ಕೂದಲು ಇಲ್ಲದೆಯೂ ಬಾಳಿ ತೋರಿಸುತ್ತೇನೆ ಎಂದು ಶಪಥ ಮಾಡಿದಳು ಸುಮಿ.

ಈಗಂತೂ ಗಂಡನ ಕೂದಲು ಉದುರುವುದು ಸಂಪೂರ್ಣ ನಿಂತಿದೆ. ಯಾಕೆಂದರೆ, ಉದುರಲು ಏನೂ ಉಳಿದಿಲ್ಲ! ಸುಮೀನೂ ತಲೆ ಕೆಡಿಸಿಕೊಂಡಿಲ್ಲ. ಗಂಡನಿಗೆ ಡ್ರೆಸ್ ಕೊಳ್ಳುವಾಗ ತಪ್ಪದೇ ಅದಕ್ಕೊಪ್ಪುವ ವಿಗ್ ಖರೀದಿಸಿ ತೊಡಿಸಿ ಗಂಡನನ್ನು 'ವಿಗ್‌ನೇಶ್ವರ'ನನ್ನಾಗಿ ಮಾಡಿದ್ದಾಳೆ. ಸ್ನೇಹಿತರು, ಸಂಬಂಧಿಗಳ ಫಂಕ್ಷನ್‌ಗಳಿಗೆ ತಾನು ಆಕರ್ಷಕ ಹೇರ್ ಸ್ಟೈಲ್ ಮಾಡಿಕೊಂಡು ತನಗೆ ಮ್ಯಾಚ್ ಆಗುವಂತಹ ವಿಗ್ ಅನ್ನು ಗಂಡನಿಗೂ ತೊಡಿಸಿ ಕರೆದೊಯ್ದು, ಗಂಡ–ಹೆಂಡ್ತಿ ಮೇಡ್ ಫಾರ್ ಈಚ್ ಅದರ್ ಅಂತ ಪ್ರಶಂಸೆ ಪಡೆಯುತ್ತಾಳೆ. 'ಸುಮಿ, ನಿನ್ನ ಗಂಡ ಸುಂದರವಾಗಿ ಕಾಣ್ತಿದ್ದಾರೆ, ಸೋ ಸ್ಮಾರ್ಟ್...' ಅಂತ ಇತರೆ ಹೆಂಗಸರು ಹೊಗಳಿದಾಗ ಹಿಗ್ಗಿ ಹೀರೇಕಾಯಿ ಆಗುತ್ತಾಳೆ. ಮದುವೆ, ನಾಮಕರಣ, ಫ್ರೆಂಡ್ಸ್ ಪಾರ್ಟಿ, ಸಿನಿಮಾ, ಶಾಪಿಂಗ್, ಪಿಕ್‌ನಿಕ್, ಶವ ಸಂಸ್ಕಾರ, ಅತ್ತೆ ಮನೆಗೆ, ತವರು ಮನೆಗೆ ಹೋಗುವಾಗ ಆಯಾ ಸಂದರ್ಭಗಳಿಗೆ ತಕ್ಕಂತಹ ಪ್ರತ್ಯೇಕ ವಿನ್ಯಾಸದ ವಿಗ್ ಅನ್ನು ಗಂಡನಿಗೆ ತೊಡಿಸಿ ಘನತೆ ಕಾಪಾಡಿಕೊಳ್ಳುತ್ತಾಳೆ.

ಶಂಕ್ರಿಯ ಕೂದಲು ಉದುರಿದ್ದು ಒಳ್ಳೆಯದೇ ಆಯ್ತು. ಅವನ ಹೇರ್ ಕಟ್ಟಿಂಗ್ ಚಾರ್ಜು, ಕೂದಲಿಗೆ ಬಣ್ಣ ಹಚ್ಚುವ ವೆಚ್ಚ, ಶಾಂಪು–ಹೇರ್ ಆಯಿಲ್ ಮುಂತಾಗಿ ಗಂಡನ ಕೂದಲು ನಿರ್ವಹಣೆಗೆ ಆಗುತ್ತಿದ್ದ ಖರ್ಚನ್ನು ಲೆಕ್ಕ ಹಾಕಿ ಆ ಹಣವನ್ನು ಡಬ್ಬಿಯಲ್ಲಿ ಹಾಕಿ ಉಳಿಸುತ್ತಿದ್ದಾಳೆ ಜಾಣೆ ಸುಮಿ. ವರ್ಷಕ್ಕೊಮ್ಮೆ ಡಬ್ಬಿ ತೆರೆದರೆ ಹಬ್ಬದ ಸೀರೆ ಖರೀದಿಗಾಗುವಷ್ಟು ಹಣ ಉಳಿತಾಯವಾಗಿರುತ್ತದೆ. ಗಡ್ಡವೂ ಉದುರಿಹೋಗಿದ್ದರೆ ಶೇವಿಂಗ್ ಖರ್ಚೂ ಉಳಿಯುತ್ತಿತ್ತು ಎಂದು ಒಮ್ಮೊಮ್ಮೆ ಬೇಸರ ಮಾಡಿಕೊಳ್ಳುತ್ತಾಳೆ.

ಕೂದಲು ಇದ್ದ ಕಾಲದಲ್ಲಿ ಶಂಕ್ರಿ ಮಳೆಯಲ್ಲಿ ನೆನೆದರೆ ಶೀತ, ನೆಗಡಿಯಾಗಿ ಆಸ್ಪತ್ರೆಗೆ ದುಡ್ಡು ಸುರಿಯಬೇಕಾಗಿತ್ತು. ಈಗ ಹಾಗಿಲ್ಲ, ಶಂಕ್ರಿ ತಲೆ ಮೇಲೆ ಬಿದ್ದ ಮಳೆ ನೀರು ಸರಾಗವಾಗಿ ಹರಿದುಹೋಗಿ ಅವನು ಆರೋಗ್ಯವಾಗಿದ್ದಾನೆ. ತಕ್ಷಣಕ್ಕೆ ಕನ್ನಡಿ ಸಿಗದಿದ್ದರೆ ಸುಮಿ ಗಂಡನ ಮಿಂಚುವ ತಲೆ ನೋಡಿಕೊಂಡು ತನ್ನ ಮುಖದ ಮೇಕಪ್ ಸರಿ ಮಾಡಿಕೊಳ್ಳುತ್ತಾಳೆ. ಗಂಡನಿಗೆ ಏನಾದರೂ ಬೇಡಿಕೆ ಸಲ್ಲಿಸುವಾಗ ಸುಮಿ ಸುಲಭವಾಗಿ ಅವನ ತಲೆ ಸವರಿ ಈಡೇರಿಸಿಕೊಳ್ಳುತ್ತಾಳೆ.

ಗಂಡಂದಿರಿಗೆ ತಲೆ ಕೂದಲು ಉದುರುವುದು ಸಹಜ, ಇದಕ್ಕಾಗಿ ಹೆಂಡತಿಯರು ಚಿಂತೆ ಮಾಡಬಾರದು ಎಂದು ಅಂತಹ ಸಮಸ್ಯೆಯಲ್ಲಿ ನರಳುತ್ತಿರುವ ಹೆಂಡತಿಯರಿಗೆ ಸಾಂತ್ವನ ಹೇಳಿಕೊಂಡು ಸುಮಿ ತನ್ನ ಗಂಡನ ಬೋಳು ತಲೆಯಲ್ಲೇ ಬಾಳು ಬೆಳಗಿಸಿಕೊಂಡಿದ್ದಾಳೆ. ■